OS No.211/2015 DW.1

ಅಸಲು ದಾವೆ ಸಂಖ್ಯೆ - 211/2025
ಡಿ.ಡಬ್ಲ್ಯೂ - 01
ದಿನಾಂಕಃ 19-12-2025
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ಶ್ರೀ.ಎಸ್ ಡಿ ಎಮ್ ವಕೀಲರಿಂದ**

ಅಸಲುದಾವಾ ಸಂಖ್ಯೆ 88/1998 ರ ತೀರ್ಪಿನ ಮತ್ತು ಡಿಕ್ರಿಯ ಪ್ರತಿಗಳನ್ನು ಹಾಜರುಪಡಿಸಿದ್ದು ಅದು ಯಾವ ಆಸ್ತಿಗೆ ಸಂಬಂಧಪಟ್ಟಿದ್ದು ಎಂದು ಹೇಳಲು ಆಗುತ್ತದೆಯಾ ಎಂದರೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ದಾವೆಯನ್ನು ಯಾರು ಯಾರ ಮೇಲೆ ಮಾಡಿದರು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯ ದಾವಾ ಆಸ್ತಿಯು ಈ ಪ್ರಸ್ತುತ ದಾವೆಯ ದಾವಾ ಆಸ್ತಿಗೆ ಸಂಬಂಧಪಟ್ಟಿದ್ದಲ್ಲ ಎಂದರೆ ನನಗೆ ಮಾಹಿತಿ ಇಲ್ಲ. ಸದರಿ ದಾವೆಯಲ್ಲಿರುವ ವಾದಿಯರು ಅಸಲುದಾವಾ ಸಂಖ್ಯೆ 88/1998 ರಲ್ಲಿ ಪಕ್ಷಗಾರರು ಇರುವುದಿಲ್ಲ ಎಂದರೆ ನನಗೆ ಮಾಹಿತಿ ಇಲ್ಲ. ನೀವು ಹಾಜರುಪಡಿಸಿರುವ ಅಸಲುದಾವಾ ಸಂಖ್ಯೆ 88/1998 ರ ಪ್ರತಿಯನ್ನು ಈ ಪ್ರಸ್ತುತ ದಾವೆಯು ತಡವಾಗಿ ವಿಚಾರಣೆ ಆಗಲಿ ಎಂದು ಹಾಜರುಪಡಿಸಿದ್ದೀರಾ ಎಂದರೆ ನನಗೆ ಮಾಹಿತಿ ಇಲ್ಲ.

ಅಸಲು ದಾವಾ ಸಂಖ್ಯೆ 167/2009 ನ್ನು ಯಾರು ಯಾರ ಮೇಲೆ ಯಾವ ಉದ್ದೇಶಕ್ಕಾಗಿ ಯಾವ ಆಸ್ತಿಯ ಮೇಲೆ ಮಾಡಿದ್ದರು ಎಂದು ಹೇಳಲು ಆಗುತ್ತದೆಯಾ ನಾನು ಶಾಲೆ ಕಲಿತಿಲ್ಲ ಎಂದು ನುಡಿಯುತ್ತಾರೆ. ನಿಡಿ- 10 ರಿಂದ 15 ನ್ನು ನಿಮ್ಮ ವಕೀಲರಿಗೆ ನೀವೇ ನಿಡಿದ್ದರಾ ಎಂದರೆ ನಮ್ಮ ತಂದೆಯವರು ನೀಡಿರುತ್ತಾರೆ. ಅಸಲು ದಾವಾ ಸಂಖ್ಯೆ 167/2009 ರಲ್ಲಿ ನಮೂದಿಸಿದ ದಾವಾ ಆಸ್ತಿ ಸಂಖ್ಯೆ 227/1 ಮತ್ತು ಪ್ರಸ್ತುತ ದಾವೆಯ ದಾವಾ ಆಸ್ತಿ ನಂ. 227 ಇದ್ದು ಇವೆರಡರ ಚಕ್ಕಬಂದಿ ಬೇರೆ ಬೇರೆ ಇದೆ ಎಂದರೆ ನನಗೆ ಈ ದಾವೆಯ ಬಗ್ಗೆ ಮಾತ್ರ ಗೊತ್ತಿರುತ್ತದೆ. ಪ್ರಸ್ತುತ ದಾವೆಯು ಆಸ್ತಿ ನಂ. 227 ಕ್ಕೆ ಸಂಬಂಧಪಟ್ಟಿದ್ದು ಎಂದರೆ ಸರಿಯಲ್ಲ. ಮುಂದುವೆರದು ನನಗೆ 227/1 ರ ಬಗ್ಗೆ ನನಗೆ ಗೊತ್ತಿರುತ್ತದೆ. ಅಸಲು ದಾವಾ ಸಂಖ್ಯೆ 167/2009 ರಲ್ಲಿರುವ ದಾವೆಯ ಆಸ್ತಿ ನಂಬರ ಮತ್ತು ಚಕ್ಕಬಂದಿ ಪ್ರಸ್ತುತ ದಾವಾ ಆಸ್ತಿಗೆ ಸಂಬಂಧಪಟ್ಟಿದ್ದಲ್ಲ ಎಂದರೆ ಅದು ನನಗೆ ಗೊತ್ತಿಲ್ಲ. ನನ್ನ ಆಸ್ತಿಯ ಬಗ್ಗೆ ಮಾತ್ರ ನನಗೆ ಗೊತ್ತು. ಅಸಲು ದಾವಾ ಸಂಖ್ಯೆ 167/2009 ದಾವೆಯಲ್ಲಿ ನ್ಯಾಯಾಲಯದವರು ಎಲ್ಲಿಯೂ ನಿಮ್ಮ ತಂದೆಯವರು ಮಾಲೀಕರು ಎಂದು ಘೋಷಿಸಿಲ್ಲ ಎಂದರೆ ನನಗೆ ಮಾಹಿತಿ ಇಲ್ಲ. ನಿಡಿ- 12 ಮತ್ತು 13 ನ್ನು ಈ ದಾವೆಯಲ್ಲಿ ಅವಶ್ಯಕತೆ ಇಲ್ಲದಿದ್ದರು ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ. ನಿಡಿ- 14 ಈ ಪ್ರಸ್ತುತ ದಾವಾ ಆಸ್ತಿಗೆ ಸಂಬಂಧಪಟ್ಟಿದಲ್ಲ ಎಂದರೆ ಅದು ಆಸ್ತಿ ನಂ. 227/1

ಕ್ಕೆ ಸಂಬಂಧಪಟ್ಟಿದ್ದು ಇರುತ್ತದೆ. ನಿಡಿ- 14 ರಲ್ಲಿ ಆಸ್ತಿ ನಂ. 227/1 ನ್ನು ತೋರಿಸಲು ಯಾವುದೇ ಚಕ್ಕಬಂದಿ ಮತ್ತು ವಿವರಣೆ ಇಲ್ಲ ಎಂದರೆ ಸರಿಯಲ್ಲ.

ನಿಡಿ- 14 ಮತ್ತು 15 ನ್ನು ಈ ದಾವೆಯಲ್ಲಿ ಅವಶ್ಯಕತೆ ಇಲ್ಲದಿದ್ದರು ಮತ್ತು ಗೊಂದಲ ಸೃಷ್ಠಿಸಿ ಮಾಡಲು ಸೃಷ್ಠಿಸಿಕೊಂಡಿದ್ದೀರಿ ಎಂದರೆ ಸರಿಯಲ್ಲ. ನಿಡಿ- 14 ಯಾರು ಯಾರ ನಡುವೆ ನಡೆದಿದೆ ಎಂದು ನಿಮಗೆ ಮಾಹಿತಿ ಇಲ್ಲ ಎಂದರೆ ನಮ್ಮ ತಂದೆಯವರಿಗೆ ಗೊತ್ತು. ದಾವಾ ಆಸ್ತಿಯ ಕಬ್ಜಾ ಬಿಟ್ಟುಕೊಡಬೇಕಾಗುತ್ತದೆ ಎಂದು ನ್ಯಾಯಾಲಯಕ್ಕೆ ಈ ಸುಳ್ಳು ದಾಖಲೆಗಳನ್ನು ಮತ್ತು ಸಂಬಂಧಪಡದ ದಾಖಲೆಗಳನ್ನು ಹಾಜರುಪಡಿಮಾಡಿದ್ದೀರಿ ಎಂದರೆ ಸಂರಿಯಲ್ಲ. ಈ ದಾವೆಯ ಆಸ್ತಿಗೆ ಸಂಬಂಧಪಟ್ಟಂತೆ ನೀವು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು.ಸವಣೂರು.